ದಿನಾಂಕಃ 02-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ-</u> ವಾದಿಯರ ಪರ ಶ್ರೀ ಎನ ಎನ ಪಿ ವಕೀಲರಿಂದ

ವಾದಿಯರು ಈ ದಾವೆಯನ್ನು ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಏನು ಪರಿಹಾರ ಕೋರಿ ದಾವೆ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿದೆ. ವಾದಿಯರು ಹಾಜರುಪಡಿಸಿದ ದಾಖಲೆಗಳ ಮಾಹಿತಿ ನನಗೆ ಇದೆ. ಪ್ರತಿವಾದ ಪತ್ರ ಬರೆಯಲು ವಕೀಲರಿಗೆ ನಾನು ನನಗೆ ತಿಳಿದ ಮಟ್ಟಿಗೆ ಮಾಹಿತಿ ಕೊಟ್ಟಿರುತ್ತೇನೆ ಹಾಗೂ ಉಳಿದ ಮಾಹಿತಿಯನ್ನು ನನ್ನ ಗಂಡ ಕೊಟ್ಟಿರುತ್ತಾರೆ. ಸಾಕ್ಷಿಗೆ ತಡಸ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 1123 ರ ಕರ ಆಕರಣೆ ಯಾದಿಯ ಧೃಡೀಕೃತ ನಕಲನ್ನು ತೋರಿಸಿ ಅದು ಅವರ ಹೆಸರಿನಲ್ಲಿ ಇದೆ ಎಂದು ಸೂಚಿಸಿದ್ದು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ. ಸದರಿ ಆಸ್ತಿಯನ್ನು ನನಗೆ ಸುಭಾಸ ಹನುಮಂತಪ್ಪ ಮಡಿವಾಳರವರು ಲೀಸ್ ಕೊಟ್ಟಿರುತ್ತಾರೆ. ಸದರಿ ಲೀಸ್ ಒಪ್ಪಂದವನ್ನು 99 ವರ್ಷಗಳಿಗೆ ಬಾಂಡ್ ಬರೆಸಿಕೊಂಡಿರುತ್ತೇನೆ. ಸದರಿ ಬಾಂಡ್ ಸುಭಾಸ ಹನುಮಂತಪ್ಪ ಮಡಿವಾಳರವರ ಹತ್ತಿರ ಇದೆ ಹಾಗೂ ಅದರ ಪ್ರತಿ ನನ್ನ ಹತ್ತಿರ ಇತ್ತು ಹಾಗೂ ಅದನ್ನು ನಾನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಕಡತದಲ್ಲಿರುವ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಖರೀದಿ ಕರಾರು ಪತ್ರ ತೋರಿಸಿ ಅದೇ ದಾಖಲೆ ಎಂದು ನುಡಿದಿದ್ದಾರೆ. ಸದರಿ ಖರೀದಿ ಕರಾರು ಪತ್ರಕ್ಕೂ ತಡಸ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 1123 ಕ್ಕೂ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರದಲ್ಲಿ ಇರುವ ಆಸ್ತಿ ಬೇರೆ ಹಾಗೂ ಕರ ಆಕರಣೆ ಯಾದಿಯಲ್ಲಿ ನನ್ನ ಹೆಸರಿನಲ್ಲಿ

ಇರುವ ಆಸ್ತಿ ಸಂಖ್ಯೆ ಬೇರೆ ಎಂದರೆ ನನಗೆ ಗೊತ್ತಿಲ್ಲ ಆದರೆ ಕರೆಂಟ್ ಹಾಗೂ ನೀರಿನ ಸರಬರಾಜು ಪಡೆಯಲು ನನ್ನ ಹೆಸರಿಗೆ ದಾಖಲೆ ಮಾಡಿಸಿಕೊಂಡಿದ್ದೆನೆ.

ತಡಸ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 1123 ರ ಉದ್ದ ಹಾಗೂ ಅಗಲದ ಅಳತೆ ನನಗೆ ಗೊತ್ತಿಲ್ಲ, ಅದು ನನ್ನ ಯಜಮಾನರಿಗೆ ಗೊತ್ತು. ಸದರಿ ಆಸ್ತಿಯ ಮೇಲೆ ಎಷ್ಟು ಸಾಲ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಸಾಲ ಯಾರು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಆಸ್ತಿ ದಾಖಲೆಯಲ್ಲಿ ಸಾಲದ ಬೋಜಾ ಇದ್ದು ನಾನು ಸಾಲ ಪಡೆಯದಿರುವ ಕಾರಣ ಅದು ಯಾಕೆ ಇದೆ ಎಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಿರುವುದಿಲ್ಲ. ಸದರಿ ಆಸ್ತಿಯನ್ನು ಪಿತ್ರಾರ್ಜಿತ ಜಮೀನಿನಿಂದ ಬಂದಂತಹ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ನಾವು 1996 ರಲ್ಲಿ ಬೇರೆಯಾಗಿದ್ದೆವೆ ಎಂದು ಹೇಳಿ ಆನಂತರ ಪ್ರಶ್ನೆಗೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

ಪಿತ್ರಾರ್ಜಿತ ಜಮೀನಿನಿಂದ ಬಂದಂತಹ ಆದಾಯದಿಂದ ಆಸ್ತಿ ಖರೀದಿಸಿರುವುದರಿಂದ ಅದರ ಮೇಲೆ ಯಾರು ಸಾಲ ಪಡೆದಿದ್ದಾರೆ ಹಾಗೂ ಆ ಆಸ್ತಿ ನನ್ನ ಹೆಸರಿಗೆ ಯಾಕೆ ದಾಖಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನನ್ನ ಯಜಮಾನರು ಸರಕಾರಿ ಸೇವೆಯಲ್ಲಿ ಇದ್ದುದ್ದರಿಂದ ನಾನು ರೈತ ಮಹಿಳೆ ಆಗಿದ್ದು ನನ್ನ ಹೆಸರಿಗೆ ಐಟಿಸಿ ಕಂಪನಿಯ ಲೈಸನ್ಸ ಪಡೆದು ವ್ಯವಹಾರ ಮಾಡುತ್ತಿದ್ದರಿಂದ ನನ್ನ ಹೆಸರಿಗೆ ಆಸ್ತಿ ದಾಖಲೆ ಮಾಡಿಕೊಂಡಿರುತ್ತೇನೆ. ತಡಸ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 1123 ರ ಚಕ್ಕಬಂದಿ ನನಗೆ ಗೊತ್ತಿಲ್ಲ.

ಸಾಕ್ಷಿಗೆ ತಡಸ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ 1101/2 ರ ಕರ ಆಕರಣೆ ಯಾದಿಯ ಧೃಡೀಕೃತ ನಕಲನ್ನು ತೋರಿಸಿ ಸದರಿ ಆಸ್ತಿ ಅವರ ಹೆಸರಿಗೆ ಹೇಗೆ ಬಂತು ಎಂದು ಕೇಳಲಾಗಿ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿದಿದ್ದಾರೆ. ಸದರಿ ಆಸ್ತಿಯ ಚಕ್ಕಂಬದಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿ 1986 ರಿಂದ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ 2012 ರಲ್ಲಿ ಅವರಿಗೆ ಸರಕಾರಿ ಸೇವೆಗೆ ನೇಮಕಾತಿ ಆಗಿದೆ ಎಂದು ನುಡಿದಿದ್ದಾರೆ. ಆ ಸಮಯದಲ್ಲಿ 1 ನೇ ಪ್ರತಿವಾದಿಗೆ ಪ್ರತಿದಿನ ರೂ. 7/- ದಿನಗೂಲಿ ಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 2012 ರಲ್ಲಿ 1 ನೇ ಪ್ರತಿವಾದಿ ಕಾರ್ಯದರ್ಶಿ ಆಗಿದ್ದರು ಹಾಗೂ ಅದಕ್ಕೂ ಮುಂಚೆ ಕರ ವಸೂಲುಗಾರರು ಆಗಿದ್ದರು. 2012 ರಲ್ಲಿ 1 ನೇ ಪ್ರತಿವಾದಿಯ ಪ್ರತಿ ತಿಂಗಳ ವೇತನ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. 1996 ರಿಂದ 1998 ರವರೆಗೆ 1 ನೇ ಪ್ರತಿವಾದಿಯ ಪ್ರತಿ ತಿಂಗಳ ವೇತನ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. 1986 ರಲ್ಲಿ 1 ನೇ ಪ್ರತಿವಾದಿಯ ಪ್ರತಿ ತಿಂಗಳ ವೇತನ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

ಬನಪ್ಪ ಎಂದರೆ ನನ್ನ ಯಜಮಾನರ ತಂದೆ ಎಂದರೆ ಸರಿ. ಬನಪ್ಪ 1997 ರಲ್ಲಿ ಮೃತಪಟ್ಟಿರುತ್ತಾರೆ. ಗಂಗವ್ವ ನನ್ನ ಅತ್ತೆ. ಗಂಗವ್ವ 2010 ರಲ್ಲಿ ಮೃತಪಟ್ಟಿರುತ್ತಾರೆ. ಅವರಿಗೆ ನನ್ನ ಯಜಮಾನರಾದ 1 ನೇ ಪ್ರತಿವಾದಿ ಹಿರಿಯ ಮಗ. 2 ನೇ ಪ್ರತಿವಾದಿ

ಅವರ ಎರಡನೇ ಮಗ. 1 ನೇ ವಾದಿ ಮೂರನೆ ಮಗ. 2 ರಿಂದ 4 ನೇ ವಾದಿಯರು ಗಂಗಮ್ಮ ಹಾಗೂ ಬನಪ್ಪನ ಇತರೇ ಮಕ್ಕಳು. ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿಯರನ್ನು ಹೊರತುಪಡಿಸಿ ಬನಪ್ಪನಿಗೆ ಬೇರೆ ಮಕ್ಕಳು ಇಲ್ಲ ಎಂದರೆ ಸರಿ.

ತಡಸ ಗ್ರಾಮದ ರಿ.ಸ. ಸಂಖ್ಯೆ 277/1 ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ತಡಸ ಗ್ರಾಮದ ರಿ.ಸ. ಸಂಖ್ಯೆ 277/3 ಕ್ಷೇತ್ರ 24 ಗುಂಟೆ ಪಿತ್ರಾರ್ಜಿತ ಆಸ್ತಿ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಅದೇ ರೀತಿ ರಿ.ಸ. ಸಂಖ್ಯೆ 331/1 ಕ್ಷೇತ್ರ 2 ಎಕರೆ, 79/3 ಕ್ಷೇತ್ರ 3 ಎಕರೆ 6 ಗುಂಟೆ ಹಾಗೂ ರಿ.ಸ. ಸಂಖ್ಯೆ 355/5 ಎ ಕ್ಷೇತ್ರ 1 ಗುಂಟೆ ಇವು ಪಿತ್ರಾರ್ಜಿತ ಆಸ್ತಿಗಳು ಎಂದರೆ ರಿ.ಸ. ಸಂಖ್ಯೆ 331/1 ನನ್ನ ಯಜಮಾನರ ಹೆಸರಿನಲ್ಲಿ ಇದೆ ಹಾಗೂ ರಿ.ಸ. ಸಂಖ್ಯೆ 79/3 ನನ್ನ ಹೆಸರಿನಲ್ಲಿ ಇದೆ.

ಈ ಹಂತದಲ್ಲಿ ವಾದಿಯರ ಪರ ಶ್ರೀ ಎನ ಎನ ಪಿ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.